# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಹೊಳಲ್ಕೆರೆ.

## ಸಿ.ಸಿ. ನಂ. 1071/2020

ದಿನಾಂಕ 16/07/2025

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಆರ್,ಬಿ. ಸ್ವಾಮಿ | ಪಿ.ಡಬ್ಲ್ಯು. | 7 |
| ತಂದೆಯ ಹೆಸರು | : | ರಾಮಣ್ಣ | ಸಿ.ಡಬ್ಲ್ಯು. | 11 |
| ವಯಸ್ಸು | : | 64 ವರ್ಷ | | |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ. | | |
| ವಾಸ ಸ್ಥಳ | : | ಚಿತ್ರದುರ್ಗ | | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು 2012 ರಿಂದ 2015 ರವರೆಗೂ ಚಿಕ್ಕಜಾಜೂರು ಪೋಲಿಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01/07/2013 ರಂದು ಚಾಸಾ-16 ರವರ ಆದೇಶದಂತೆ ಚಿಕ್ಕಜಾಜುರು ಪೊಲೀಸ್ ಠಾಣೆಯ ಮೊ. ನಂ. 128/13 ರ ಕಲಂ 457, 380 ಐಪಿಸಿ ಪ್ರಕರಣದಲ್ಲಿ ಆರೋಪಿ ಮತ್ತು ಮಾಲುಗಳ ಪತ್ತೆಗಾಗಿ ನನ್ನನ್ನು ಮತ್ತು ಚಾಸಾ-12 ಮತ್ತು 13 ರವರನ್ನು ನೇಮಿಸಿದ್ದು, ಅದರಂತೆ ನಾವುಗಳು ಸಾಸಲುಹಳ್ಳ ಸರ್ಕಲ್ ಬಳಿ ಗಸ್ತು ಮಾಡುತ್ತಿರುವಾಗ ಸಂಜೆ 6 ಗಂಟೆ ಸಮಯದಲ್ಲಿ ನಮ್ಮನ್ನು ನೋಡಿ ಎದುರಿಗೆ ಬರುತ್ತಿದ್ದ ಯಾರೋ ಒಬ್ಬ ಆಸಾಮಿಯು ಓಡಿ ಹೋಗಲು ಪ್ರಯತ್ನಿಸುತ್ತಿದ್ದವನನ್ನು ನಾವು ಅವನನ್ನು ಹಿಂಬಾಲಿಸಿ ಹಿಡಿದು ಏಕೆ ನಮ್ಮನ್ನು ನೋಡಿ ಓಡಿ ಹೋಗುತ್ತಿದ್ದೀಯಾ ಎಂದು ವಿಚಾರ ಮಾಡಲಾಗಿ ಸಮಂಜಸವಾದ ಉತ್ತರ ನೀಡಿರುವುದಿಲ್ಲ ಹಾಗೂ ಆತನ ಹೆಸರನ್ನು ಕೇಳಲಾಗಿ ನವೀನ ಯಾನೆ ಸ್ವಾಮಿ ತಂದೆ ಗಂಗಣ್ಣ, ಸುಮಾರು 19 ವರ್ಷ, ಶಿವನಿ ಗ್ರಾಮ, ತರೀಕೆರೆ ತಾಲ್ಲೂಕು ಎಂದು ತಿಳಿಸಿದ್ದು, ಆತನನ್ನು ಸಂಜೆ 7 ಗಂಟೆಗೆ ಸಿಪಿಐ ಸಾಹೇಬರವರ ಮುಂದೆ ತಂದು ಹಾಜರುಪಡಿಸಿರುತ್ತೇವೆ. ಸದರಿಯವನನ್ನು ಮಾನ್ಯ ಸಿಪಿಐ ಸಾಹೇಬರವರು ಪಂಚರ ಸಮಕ್ಷಮ ವಿಚಾರಿಸಿ ಚೆಕ್ ಮಾಡಲಾಗಿ ಸದರಿಯವನ ಪ್ಯಾಂಟ್ ಜೇಬಿನಲ್ಲಿ

ಒಂದು ಬಂಗಾರದ ಕೊರಳ ಚೈನು ದೊರೆತಿದ್ದು, ಅದರ ಬಗ್ಗೆ ವಿಚಾರ ಮಾಡಲಾಗಿ, ನಮ್ಮ ಠಾಣೆಯ ಮೊ. ನಂ.128/13 ರ ಪ್ರಕರಣಕ್ಕೆ ಸಂಬಂಧಿಸಿದ್ದಾಗಿದ್ದು, ಆತನನ್ನು ದಸ್ತಗಿರಿ ಮಾಡಿ ನಂತರ ದಿನಾಂಕ 30/07/2013 ರಂದು ಈ ಕೇಸಿನಲ್ಲಿ ತಲೆ ಮರೆಸಿಕೊಂಡಿದ್ದ ಹನುಮಂತ , ಪರಮೇಶಿ ಮತ್ತು ಪಾಪಣ್ಣ ಇವರನ್ನು ಪತ್ತೆ ಮಾಡಲು ನಮ್ಮನ್ನು ನೇಮಿಸಿ ಕಳುಹಿಸಿದ್ದು, ನಾನು ಮೊದಲಿಗೆ ತರೀಕೆರೆ ತಾಲ್ಲೂಕು ಶಿವನಿ ಗ್ರಾಮಕ್ಕೆ ಹೋಗಿ ಸದರಿಯವರ ಬಗ್ಗೆ ವಿಚಾರಿಸಲಾಗಿ ಅವರು ಸುಮಾರು ದಿನಗಳಿಂದ ಗ್ರಾಮದಲ್ಲಿ ಹಾಜರಿ ಇರುವುದಿಲ್ಲವೆಂದು ತಿಳಿದು ಬಂದಿರುತ್ತದೆ. ಸದರಿಯವರ ಪೂರ್ಣ ವಿಳಾಸವನ್ನು ವಿಚಾರಿಸಲಾಗಿ ಪರಮೇಶ್ ತಂದೆ ಸೋಮಣ್ಣ, ಹನುಮಂತಪ್ಪ ತಂದೆ ಜಾಊರಪ್ಪ, ಶಿವನಿ ಗ್ರಾಮ, ತರೀಕೆರೆ ತಾಲ್ಲೂಕು ಎಂದು ತಿಳಿದು ಬಂದಿದ್ದು, ನಂತರ ಚನ್ನಗಿರಿ ಗ್ರಾಮಕ್ಕೆ ಹೋಗಿದ್ದು ಪಾಪಣ್ಣರವರ ಬಗ್ಗೆ ಬಾತ್ಮಿದಾರರಲ್ಲಿ ವಿಚಾರ ಮಾಡಲಾಗಿ ಆತನೂ ಸಹ ಸುಮಾರು ದಿನಗಳಿಂದ ಗ್ರಾಮದಲ್ಲಿ ಇರುವುದಿಲ್ಲ ಎಂದು ತಿಳಿದು ಬಂದಿದ್ದು ಆತನ ಸಂಪೂರ್ಣ ವಿಳಾಸ ವಿಚಾರಿಸಲಾಗಿ ಪಾಪಣ್ಣ ಯಾನೆ ನಾಗರಾಜ್ ತಂದೆ ಸತ್ಯಪ್ಪ, ಚನ್ನಗಿರಿ ಗ್ರಾಮ,ಚನ್ನಗಿರಿ ತಾಲ್ಲೂಕು ಎಂದು ತಿಳಿದು ಬಂದಿದ್ದು, ಸದರಿ ವಿಚಾರಗಳೆಲ್ಲವನ್ನೂ ಕಚೇರಿಗೆ ಮರಳಿ ಬಂದು ಸಿಪಿಐ ಸಾಹೇಬರವರಿಗೆ ವರದಿ ಮಾಡಿರುತ್ತೇನೆ ಮತ್ತು ಆ ಬಗ್ಗೆ ದಿನಾಂಕ 31/07/2013 ರಂದು ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ.

**<u>ಪಾಟಿ ಸವಾಲು : 2 ಮತ್ತು 3ನೇ ಆರೋಪಿತರ ಪರ – ಶ್ರೀ ಎಸ್.ವಿ.ಕೆ. ವಕೀಲರಿಂದ</u>**

ಈ ಪ್ರಕರಣದ ಆರೋಪಿ ಮತ್ತು ಮಾಲುಗಳನ್ನು ಪತ್ತೆ ಮಾಡಿಕೊಂಡು ಬರಲು ನಮಗೆ ಮೌಖಿಕವಾಗಿ ಆದೇಶಿಸಿದ್ದು ಆ ಬಗ್ಗೆ ಯಾವುದೇ ಲಿಖಿತ ಆದೇಶವನ್ನೂ ಮಾಡಿರುವುದಿಲ್ಲ. 1ನೇ ಆರೋಪಿತನು ಇನ್ನುಳಿದ ಆರೋಪಿತರ ಬಗ್ಗೆ ನಮಗೆ ಯಾವುದೇ ಮಾಹಿತಿಯನ್ನೂ ನೀಡದೇ ಇದ್ದರೂ ಸಹ ನೀಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ರಿಂದ 4 ನೇ ಆರೋಪಿತರ ಬಗ್ಗೆ ಎಲ್ಲಿಯೂ ಸಹ ವಿಚಾರಿಸದೇ ಇದ್ದರೂ ಸಹ ಮತ್ತು ಅವರ ವಿಳಾಸದ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ಇದ್ದರೂ ಸಹ ವಿಚಾರಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಯಾವುದೇ ವಿಚಾರಗಳೂ ನನಗೆ ಗೊತ್ತಿಲ್ಲದೇ ಇದ್ದರೂ ಸಹ ನನ್ನ ಮೇಲಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಸಂಗತಿಗಳೆಲ್ಲ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**4ನೇ ಆರೋಪಿತರ ಪರ ವಕೀಲರು 2 ಮತ್ತು 3ನೇ ಆರೋಪಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ಕೋರಿ ಕೊಂಡಿದ್ದು, ಅನುಮತಿಸಲಾಗಿರುತ್ತದೆ.**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

C/C **ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.**